O. S. 208/2013
D.W.1

**<u>ಸಾಕ್ಷಿಯನ್ನು ದಿನಾಂಕಃ 23-01-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಶ್ರೀ.ಕೆ.ಜೆ.ಪಿ.ವಕೀಲರವರಿಂದಃ</u>**

ದಾವಾ ಆಸ್ತಿಯ ವಾದಿಯ ಅಜ್ಜ ಸಕ್ರಿ ಸಣ್ಣ ಪರಸಪ್ಪ ಇವರ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. 1928ರ ರಿ ಸೆಟ್ಲಿಮೆಂಟ್ ರಿಜಿಸ್ಟರಿನಲ್ಲಿ ಸದರಿ ಸಕ್ರಿ ಸಣ್ಣ ಪರಸಪ್ಪ ಹೆಸರು ದಾಖಲು ಇದೆ ಎಂದರೆ ಸರಿಯಲ್ಲ. ಆ ವಿಚಾರ ಗೋತ್ತಿದ್ದರು ಸಹಿತ ವಿನಾಕಾರಣ ನಿರಾಕರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಕ್ರಿ ಸಣ್ಣ ಪರಸಪ್ಪನಿಗೆ ಸಕ್ರಿ ಗಂಗಪ್ಪ ಮತ್ತು ಹನುಮಂತಪ್ಪ ಎಂಬ ಇಬ್ಬರು ಸಹೋದರರು ಇದ್ದರು ಎಂದರೆ ಸರಿ. 2ನೇ ವಾದಿಯು ಸಕ್ರಿ ಗಂಗಪ್ಪನ ಮಗ ಎಂದರೆ ಸರಿ. ಸಕ್ರಿ ಹನುಮಪ್ಪನು ನಮಗೆ ದಾವಾ ಸ್ವತ್ತು ಮಾರಾಟ ಮಾಡುವ ಕಾಲಕ್ಕೆ ದಾವಾ ಆಸ್ತಿ ವಿಭಾಗವಾಗಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಖರೀದಿ ಮಾಡುವ ಕಾಲಕ್ಕೆ ದಾವಾ ಸ್ವತ್ತಿನ ಪಹಣಿ ಪರಸಪ್ಪನ ಹೆಸರಿನಲ್ಲಿ ಇತ್ತು. ಸಕ್ರಿ ಸಣ್ಣ ಪರಸಪ್ಪ ಪೋತಿಯಾದ ನಂತರ ಆತನ ಎಲ್ಲಾ ಮಕ್ಕಳ ಹೆಸರು ಪೋತಿ ವಾರಸು ನೇಲೆಯಲ್ಲಿ ದಾಖಲಾಗಬೇಕಾಗಿತ್ತು ಮತ್ತು ಹನುಮಂತಪ್ಪನಿಗೆ ಮಾರಾಟ ಮಾಡಲು ಸಂಪೂರ್ಣ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹನುಮಪ್ಪನಿಂದ ತೆಗೆದುಕೊಂಡು ಖರೀದಿ ಪತ್ರದಲ್ಲಿ ಸರ್ವೆ ನಂಬರ್ ನಮೂದು ಇರುವುದಿಲ್ಲ ಎಂದರೆ ಸರಿ. ಖರೀದಿ ಪತ್ರದಲ್ಲಿ ವಿಸ್ತೀರ್ಣ ನಮೂದು ಇರುವುದಿಲ್ಲ, ಅದರೆ ಚಕ್ಕುಬಂದಿ ಇರುತ್ತದೆ. ನಾನು ಖರೀದಿ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಹನುಮಪ್ಪ ನನಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದಲ್ಲಿ ಇತ್ತೀಚೆಗೆ ಹೆಚ್ಚುವರಿಯಾಗಿ ವಿಸ್ತೀರ್ಣವನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಿಡಿ-14 ಕ್ರಯಪತ್ರವನ್ನು ನೊಂದಣಿ ಮಾಡಿಸಿರುವುದಿಲ್ಲ. ಸದರಿ ದಾಖಲೆಯನ್ನು ನೊಂದಣಿಮಾಡಿಕೊಡುವಂತೆ ನಾನು ಕೇಳಿರುತ್ತೇನೆ. ದಾವಾ ಆಸ್ತಿ ಹನುಮಪ್ಪನ ಹೆಸರಿನಲ್ಲಿ ಪಂಚಾಯಿಯಲ್ಲಿ ಪೋಡಿಯಾಗಿರುತ್ತದೆ. ಆ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಖರೀದಿ ಮಾಡುವ ಮೊದಲು ಕೃಷಿಯೇತರ ಜಮೀನಿನಾಗಿ ಪರಿವರ್ತನೆಯಾಗಿರುವ ಬಗ್ಗೆ ನನಗೆ ಗೋತ್ತಿರುವುದಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ನಿಡಿ-14ರಲ್ಲಿ 1ನೇ ಸಾಲಿನಿಂದ ಕೊನೆಯಿಂದ 2ನೇ ಸಾಲಿನವರೆಗೆ ಒಂದು ಅಕ್ಷರದಲ್ಲಿ ಬರೆಯಲಾಗಿದ್ದು, ಕೊನೆಯ ಸಾಲನ್ನು ಇನ್ನೊಂದು ಅಕ್ಷರದಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಪತ್ರವನ್ನು ಓಬಾಳ ಫಕೀರಪ್ಪರವರು ಪಂಚಾಯಿಯಲ್ಲಿ ಬರೆದಿರುವರು. ಸದರಿ ಪತ್ರವನ್ನು ಓಬಾಳ ಫಕೀರಪ್ಪ ಬರೆದಿವುದಿಲ್ಲ ಎಂದರೆ ಸರಿಯಲ್ಲ, ಮನಸ್ಸಿಗೆಬಂದ ಹೆಸರನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳ ಸಹೋದರನಾದ ಸಕ್ರಿ ಗಂಗಪ್ಪ ತನ್ನ ಏಕ ಹೆಸರಿಗೆ ದಾವಾ ಆಸ್ತಿಯನ್ನು ಮ್ಯುಟೇಶನ್ ಮಾಡಿಕೊಂಡಿದ್ದನ್ನು ಉಳಿದ ಕುಟುಂಬದ ಸದಸ್ಯರು ಸಕ್ಷಮ ಪ್ರಾಧಿಕಾರದಲ್ಲಿ ಪ್ರಶ್ನಿಸಿರುವರು ಎಂದರೆ ನನಗೆ ಗೋತ್ತಿರುವುದಿಲ್ಲ. ಆ

O. S. 208/2013

D.W.1

ಪ್ರಕಾರ ತಹಶಿಲ್ದಾರರು ಮತ್ತು ಎ.ಸಿ. ರವರು ಎಲ್ಲಾ ಕುಟುಂಬ ಸದಸ್ಯರು ಎಂದರೆ ಸಕ್ರಿ ಪರಸಪ್ಪನ ಎಲ್ಲಾ ವಾರಸುದಾರರ ಹೆಸರಿಗೆ ಜಂಟಿಯಾಗಿ ದಾಖಲುಮಾಡುವಂತೆ ಆದೇಶಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಆ ವಿಚಾರ ಗೊತ್ತಿದ್ದರು ದಾವಾ ಆಸ್ತಿ ಕಬಳಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2017-2018 ರಿಂದ ದಾವಾ ಆಸ್ತಿ ಎಲ್ಲಾ ಕುಟುಂಬದ ಸದಸ್ಯರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಮೌನ ವಹಿಸುವರು. ಹನುಮಪ್ಪನ ಹೆಸರು 1968 ರಿಂದ ಇಲ್ಲಿಯವರೆಗೆ ಪಹಣಿಯಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಹನುಮಪ್ಪನ ಹೆಸರಿನಲ್ಲಿ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ಹನುಮಪ್ಪನಿಗೆ ಯಾವುದೇ ಸಂಪೂರ್ಣ ಮಾಲಿಕತ್ವ ಇರದಿದ್ದರೂ ಸಹ ದಾವಾ ಆಸ್ತಿಯನ್ನು ಕಬಳಿಸಲು ನೊಂದಾಯಿತವಲ್ಲದ ಖರೀದಿಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಖರೀದಿಪತ್ರದ ಆಧಾರದ ಮೇಲೆ ವಾದಿಗಳ ಸ್ವಾಧೀನ ಅನುಭೋಗಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎಂದೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 1928 ರಿಂದ ಇಂದಿನವರೆಗೆ ವಾದಿ ಹಾಗೂ ಅವರ ಪೂರ್ವಜರು ದಾವಾ ಆಸ್ತಿಯ ಸ್ವಾಧಿನದಲ್ಲಿ ಇರುವರು ಎಂದರೆ ಸರಿಯಲ್ಲ. ದಾವಾ ಸ್ವತ್ತು ಹಾಗೂ ನಿಡಿ-14 ರಲ್ಲಿ ಕಾಣಸಿರುವ ಚಕ್ಕುಬಂದಿ ನಡುವೆ ಇರುವ ಆಸ್ತಿ ಬೇರೆ-ಬೇರೆ ಎಂದರೆ ಸರಿಯಲ್ಲ. ಪ್ರಬಾವ ಬೀರಿ ಪಂಚಾಯಿತಿ ದಾಖಲೆಯಲ್ಲಿ ಸೇರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಂಚಾಯಿತಿಯವರು ದಾಖಲೆಯನ್ನು ಪರಿಶೀಲಿಸದೇ ನನ್ನ ಹೆಸರು ದಾಖಲೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಆಧಾರ ಮೇಲೆ ದಾವಾ ಆಸ್ತಿಯ ವಿಸ್ತೀರ್ಣವನ್ನು ಕಡಿಮೆ ಮಾಡುವಂತೆ ನಾನು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿರುತ್ತೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

23-01-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**